# ಆಹಾ ಸುದ್ದಿ!

★ ಸಸಿತೋಟ



ಅಮೆರಿಕದ ಮ್ಯಾನ್‌ಹಟ್ಟನ್ನಿನಲ್ಲಿರುವ ಈ ಬೆಕ್ಕಿನ ಕೆಫೆಯಲ್ಲಿ ಬೆಕ್ಕೊಂದು ‘ಕೆಟಾಚಿನೊ’ ಕಾಫಿಯ ಸುವಾಸನೆ ಆಘ್ರಾಣಿಸುತ್ತಿದೆ. ಜೊತೆಗೊಂದು ಕ್ಯಾಟ್ ಬರ್ಗರ್. ಬೆಕ್ಕುಗಳ ಆಹಾರವನ್ನು ಜನಪ್ರಿಯಗೊಳಿಸಲು ಅಲ್ಲ, ಕಾಫಿ ಹೀರುತ್ತ ಬೆಕ್ಕುಗಳ ಆರೋಗ್ಯದ ಬಗ್ಗೆ ಅರಿಯಲು ಈ ಕೆಫೆ ಶುರುವಾಗಿದೆಯಂತೆ. ಅಮೆರಿಕದ ಬೆಕ್ಕುಗಳೇ ಧನ್ಯ.

ಈಕೆ ಚೀನಾದ ಶಿ ಪೆಂಗ್. 4.5 ಲಕ್ಷ ಜೇನ್ನೊಣಗಳಿಂದ ಸ್ಯೂಟ್ ಮಾಡಿಕೊಂಡಿದ್ದಾಳೆ. 45.6 ಕೆಜಿ ಭಾರವನ್ನು 40 ನಿಮಿಷಗಳ ಕಾಲ ಹೊತ್ತುಕೊಂಡಾಕೆ ಈ ಜೇನ್ನೊಣಗಳನ್ನು ಒಮ್ಮೆ ಬಿಡುಗಡೆ ಮಾಡಿ ಪುನಃ ದೇಹದತ್ತ ಆಕರ್ಷಿಸುತ್ತಾಳಂತೆ. ಆಕೆಯದ್ದು ಹೂವಿನಂತಹ ದೇಹ ಎನ್ನಲಡ್ಡಿಯಿಲ್ಲ.



ಬ್ರಿಟನ್ನಿನಲ್ಲಿ ದಢೂತಿ ದೇಹದವರು ನಿಧನರಾದ ಮೇಲೆ ಅವರ ಸಂಬಂಧಿಕರು ಚಿಂತಿಸುವ ಅಗತ್ಯವೇ ಇಲ್ಲ. ಅಂಥವರಿಗಾಗಿ ಸ್ಮಶಾನದಲ್ಲಿ ದೊಡ್ಡ ಅಳತೆಯ ಗುಂಡಿ ತೋಡಲು ಸರ್ಕಾರವೇ ಒಂದು ಮಂಡಳಿ ರಚಿಸಿದೆಯಂತೆ. ಸ್ಮಶಾನದ ಆರಂಭದಲ್ಲೇ ಇಂತಹ ದೊಡ್ಡ ಕುಳಿಗಳು ಲಭ್ಯ ಇರುವಂತೆ ನೋಡಿಕೊಳ್ಳಲಾಗುವುದು. ದಢೂತಿ ದೇಹ ಹೊತ್ತ ಶವ ಪೆಟ್ಟಿಗೆಯನ್ನು ದೂರ ಸಾಗಿಸಲು ಹರ ಸಾಹಸ ಪಡುವುದನ್ನು ತಪ್ಪಿಸಲು ಈ ಉಪಾಯ. ಈಗಾಗಲೇ ಆಸ್ಪತ್ರೆಯ ಶವಾಗಾರ ಹಾಗೂ ಹೆಣ ಸುಡುವ ಸ್ಮಶಾನಗಳಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆಯಂತೆ. ಬ್ರಿಟನ್ನಿನಲ್ಲಿ ದಢೂತಿ ದೇಹ ಹೊಂದಿದವರು ಸತ್ತ ನಂತರದ ಚಿಂತೆ ತಪ್ಪಿಸಿಕೊಂಡಂತಾಗಿದೆ.



ಶ್ರೀಲಂಕಾದ ಸೆಲೆಬ್ರಿಟಿ ಬಾಣಸಿಗ ಪ್ಯುಬ್ಲಿಸ್ ಸಿಲ್ವಿಯ ಹೊರ ತಂದಿರುವ ಅತಿ ಚಿಕ್ಕ ಅಡುಗೆ ಪುಸ್ತಕವಿದು. 1 ಸೆಂ.ಮೀ X 1 ಸೆಂ.ಮೀ ಇರುವ ಈ ಹೊಸ ರುಚಿ ಪುಸ್ತಕದ ತೂಕ ಕೇವಲ 5 ಮಿ.ಗ್ರಾಂ. ಪುಸ್ತಕದಲ್ಲಿರುವ ಹೊಸ ರುಚಿಯ ಪರಿಕರಗಳ ಅಳತೆಯೂ ಮೈಕ್ರೋ, ಮಿನಿಯಲ್ಲಿದೆಯೇ ಎಂಬುದರ ವಿವರಗಳು ಗೊತ್ತಾಗಿಲ್ಲ.

ಚೀನಾದ ರೈತ ಮೆಂಗ್ ನಿ ಎಂಬಾತನಿಗೆ ಚಿಕ್ಕಂದಿನಿಂದಲೂ ಗಗನಯಾತ್ರಿಯಾಗುವ ಕನಸು. ಆದ್ರೇನು ಮಾಡೋದು, ಶಾಲೆಯನ್ನು ಅರ್ಧಕ್ಕೇ ಬಿಟ್ಟ ಮೆಂಗ್ ಈ 63ರ ವಯಸ್ಸಿನಲ್ಲಿ ಹೊಲವನ್ನು ಮಾರಿ ಮನೆಯ ಛಾವಣಿಯ ಮೇಲೆ ಅಮೆರಿಕದ ಗಗನ ನೌಕೆಯ ಪ್ರತಿಕೃತಿಯನ್ನು ನಿರ್ಮಿಸಿ ಕನಸನ್ನು ನನಸು ಮಾಡಿಕೊಂಡಿದ್ದಾನೆ. ಸ್ಥಳೀಯರು ಹಣ ತೆತ್ತು ಇದರೊಳಗೆ ಹೋಗಿ ಸುತ್ತಲಿನ ಹೊಲ- ಗದ್ದೆಗಳನ್ನು ವೀಕ್ಷಿಸುತ್ತಾರಂತೆ. ರೈತ ವ್ಯವಹಾರದಲ್ಲೂ ನುರಿತುಬಿಟ್ಟಿದ್ದಾನೆ.



ಜರ್ಮನಿಯಲ್ಲಿ ಕಳೆದ ವಾರ ಹೊಸ ಮೊಬೈಲ್ ಆ್ಯಪ್ ‘ಪೆಪ್ರ’ ಬಿಡುಗಡೆಯಾಗಿದೆ. ಗ್ರಾಹಕರಿಗೆ ಸಮೀಪವಿರುವ ವೇಶ್ಯೆಯರನ್ನು ಪತ್ತೆ ಮಾಡಲು ಇದು ನೆರವು ನೀಡುವುದಂತೆ. ಗಿರಾಕಿಗಳು ಆ್ಯಪ್‌ನಲ್ಲಿ ಲಾಗಾನ್ ಆಗಿ ತಮಗೆ ಯಾವ ರೀತಿಯ ವೇಶ್ಯೆ ಬೇಕು, ಎಷ್ಟು ಹಣ ಕೊಡಲು ಸಿದ್ಧ ಎಂಬುದನ್ನು ಟೈಪ್ ಮಾಡಬೇಕಂತೆ. ವೇಶ್ಯೆಯರು ಬೀದಿ ಬದಿಯಲ್ಲಿ ಚಳಿಯಲ್ಲಿ ನಡುಗುತ್ತ ಗಿರಾಕಿಗಳಿಗಾಗಿ ಕಾಯುವುದು ಈ ಆ್ಯಪ್‌ನಿಂದ ತಪ್ಪಿರಬಹುದು.